ಇಂಜಿನಿಯರ್, ಸಾರ್ವಜನಿಕ ಆರೋಗ್ಯ ತಾಂತ್ರಿಕ ವಲಯ ಇವರು ತಾಂತ್ರಿಕ ಮಂಜೂರಾತಿಯನ್ನು 3-1-93ರಂದು ನೀಡಿದ್ದಾರೆ.

ಪ್ರಧಾನ ಇಂಜಿನಿಯರ್ ಈ ಯೋಜನೆಯ ಕಾಮಗಾರಿಯನ್ನು ಪರಿಶೀಲಿಸಿ, ಈ ಯೋಜನೆಯಡಿಯಲ್ಲಿ ಹಾಲಿ ಇರುವ ಶುದ್ಧೀಕರಣ ಘಟಕವನ್ನು ಉತ್ತಮಪಡಿಸಲು ಅವಕಾಶ ಇಲ್ಲದಿರುವುದನ್ನು ಕಂಡು ಸಂಬಂಧಪಟ್ಟ ಅಧಿಕಾರಿಗಳಿಗೆ ಶುದ್ಧೀಕರಣ ಘಟಕದ ಅಭಿವೃದ್ಧಿ ಕೆಲಸಗಳನ್ನು ಮಾಡಬೇಕೆಂದು ಮತ್ತು ವಿರುಕೊಳವೆಯ ವಿನ್ಯಾಸವನ್ನು ಇನ್ನೊಮ್ಮೆ ಪರಿಶೀಲಿಸಬೇಕೆಂದು ಆದೇಶಿಸಿದರು. ಅದರಂತೆ ಕಾಮಗಾರಿಯ ಅಂದಾಜು ಪಟ್ಟಿಯನ್ನು ರೂ. 67.00 ಲಕ್ಷಕ್ಕೆ ಪರಿಷ್ಕರಿಸಲಾಗಿದೆ. ಈ ಪರಿಷ್ಕೃತ ಅಂದಾಜು ಪಟ್ಟಿಯನ್ನು ಪ್ರಧಾನ ಇಂಜಿನಿಯರ್, ಸಾರ್ವಜನಿಕ ಆರೋಗ್ಯ ತಾಂತ್ರಿಕ ವಲಯ ಇವರು ಪರಿಶೀಲಿಸಿದ್ದು ಅದರಲ್ಲಿ ಕೆಲವು ಮಾರ್ಪಾಡು ಮಾಡಲು ಅಧೀಕ್ಷಕ ಅಭಿಯಂತರರು, ಮೈಸೂರು ಇವರಿಗೆ ಕಳುಹಿಸಲಾಗಿದೆ. ಈ ಅಂದಾಜು ಪಟ್ಟಿಗೆ ಬೇಗನೆ ಸರ್ಕಾರದ ವತಿಯಿಂದ ಪರಿಷ್ಕೃತ ಆಡಳಿತಾತ್ಮಕ ಮಂಜೂರಾತಿ ಮತ್ತು ನಂತರ ಪ್ರಧಾನ ಇಂಜಿನಿಯರ್‌ರವರಿಂದ ತಾಂತ್ರಿಕ ಮಂಜೂರಾತಿಯನ್ನು ನೀಡಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

(4) ಕಳ್ಳಂಬೆಳ್ಳ ಕ್ಷೇತ್ರದ ವ್ಯಾಪ್ತಿಯಲ್ಲಿ ನಿವೇಶನಗಳ ಹಂಚಿಕೆ

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಉಪಸಭಾಧ್ಯಕ್ಷರೆ, ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಶಿರಾ ತಾಲ್ಲೂಕ್, ಕಳ್ಳಂಬೆಳ್ಳ ಹೋಬಳಿ ಹಾಲೀನಹಳ್ಳಿ ಗ್ರಾಮದ ಸರ್ವೆ ನಂ. 13 (ಅಜ್ಜೀನಹಳ್ಳಿ ಕಾಲೋನಿ) ರಲ್ಲಿ ನಿವೇಶನಗಳನ್ನು ವಿಂಗಡಿಸಿದ್ದು ಸದರಿ ನಿವೇಶನಗಳನ್ನು ಅರ್ಹರಲ್ಲದವರಿಗೆ ಮಂಡಲ್ ಪಂಚಾಯಿತಿ ಮತ್ತು ಗ್ರಾಮೀಣ ಪಂಚಾಯಿತಿಯವರು ಹಕ್ಕು ಪತ್ರವನ್ನು ನೀಡಿದ್ದರು. ಅರ್ಹರಲ್ಲದವರಿಗೆ ನೀಡಿರುವುದನ್ನು ಪ್ರಶ್ನಿಸಿ ತುಮಕೂರು ಜಿಲ್ಲಾಪರಿಷತ್ ಮುಖ್ಯ ಕಾರ್ಯದರ್ಶಿಯವರಿಗೆ ಅರ್ಜಿಯನ್ನು ಸಾರ್ವಜನಿಕರು ಸಲ್ಲಿಸಿದಾಗ ಮುಖ್ಯ ಕಾರ್ಯದರ್ಶಿಯವರು ಸ್ಥಳ ಪರಿಶೀಲಿಸಿ ಕೂಲಂಕುಷವಾದ ತನಿಖೆಯನ್ನು ನಡೆಸಿ, ಅರ್ಹರಲ್ಲದವರಿಗೆ ಹಕ್ಕು ಪತ್ರ ನೀಡಿರುತ್ತಾರೆಂದು ತಿಳಿದು ಎಲ್ಲಾವನ್ನು ವಜಾಗೊಳಿಸಿ, ಆಶ್ರಯ ಸಮಿತಿಗೆ ವಿತರಿಸುವಂತೆ ತಿಳಿಸಿದ್ದರು. ಸದರಿ ನಿವೇಶನಗಳು ರಾಷ್ಟ್ರೀಯ ಹೆದ್ದಾರಿ ನಂ (4)ರಲ್ಲಿದ್ದು ಬಹಳ ಬೆಲೆ ಬಾಳುವ ನಿವೇಶನಗಳಾಗಿರುವುದರಿಂದ ಶಿರಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು ಎಲ್ಲಾ ನೀತಿ ನಿಯಮಗಳನ್ನು ಉಲ್ಲಂಘನೆ ಮಾಡಿ ತಮ್ಮ ಮನಸ್ಸಿಗೆ ಬಂದಂತೆ, ಅರ್ಹರಲ್ಲದವರಿಗೆ ದಿನಾಂಕ 14.2.96ರಂದು ಹಕ್ಕು ಪತ್ರವನ್ನು ವಿತರಿಸಿರುತ್ತಾರೆ. ಹಕ್ಕು ಪತ್ರಗಳನ್ನು ತಮಗೆ ಬೇಕಾದವರಿಗೆ ವಿತರಿಸಿರುತ್ತಾರೆ ಮತ್ತು ತಾಲ್ಲೂಕ್ ಪಂಚಾಯಿತಿ ಸಮಿತಿಯ ಮುಂದೆಯು ಸಹ ತಂದಿರುವುದಿಲ್ಲ. ಆದ್ದರಿಂದ ಕೂಡಲೇ ತಡೆಯಾಜ್ಞೆ ನೀಡಿ ತಪ್ಪಿತಸ್ಥ ಅಧಿಕಾರಿಯ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಬಸವರಾಜ ರೆಡ್ಡಿ (ವಸತಿ ರಾಜ್ಯ ಸಚಿವರು) :

ಅಧ್ಯಕ್ಷರೇ,

ತುಮಕೂರು ಜಿಲ್ಲೆ ಶಿರಾ ತಾಲ್ಲೂಕು ಕಳ್ಳಂಬೆಳ್ಳ ಹೋಬಳಿ, ಕಳ್ಳಂಬೆಳ್ಳ ಗ್ರಾಮ ಪಂಚಾಯತ್, ಹಾಲೇನಹಳ್ಳಿ ಗ್ರಾಮದ ಸರ್ವೆ ನಂ. 143ರಲ್ಲಿ 1972ರ ಸಾಲಿನಲ್ಲಿ 172 ನಿವೇಶನಗಳನ್ನು ಮತ್ತು 1984ರಲ್ಲಿ 128 ನಿವೇಶನಗಳನ್ನು ಅಭಿವೃದ್ಧಿ ಪಡಿಸಿ ಕ್ಷೇತ್ರಾಭಿವೃದ್ಧಿ ಅಧಿಕಾರಿ ನಿವೇಶನ ಹಂಚಿರುತ್ತಾರೆ. ಈ ಪೈಕಿ 1972ರಲ್ಲಿ ನೀಡಲಾದ 71 ನಿವೇಶನಗಳು ಹಾಗೂ ತದನಂತರ ನೀಡಲಾದ 27 ನಿವೇಶನಗಳು ಒಟ್ಟು 98 ಫಲಾನುಭವಿಗಳಿಗೆ ನಿವೇಶನ ನೀಡಲಾದ ಜಾಗದಲ್ಲಿ ಮನೆ ಕಟ್ಟಿಲ್ಲದ ಪ್ರಯುಕ್ತ

ದಿನಾಂಕ : 12-7-89ರಂದು ಅಂದಿನ ಮಂಡಲ ಪಂಚಾಯತ್ ಈ ಮಂಜೂರಾತಿಯನ್ನು ರದ್ದುಪಡಿಸಿ ಪುನಃ ಹೊಸದಾಗಿ 79 ಫಲಾನುಭವಿಗಳಿಗೆ ಮಂಡಲ ಪಂಚಾಯತಿ ಹಕ್ಕುಪತ್ರ ನೀಡಿರುತ್ತಾರೆ. ಈ ಬಗ್ಗೆ ಮಂಡಲ ಪಂಚಾಯತಿ ಯಾವುದೇ ನಿಯಮಾವಳಿಗಳನ್ನು ಪಾಲಿಸದೇ ಇದ್ದ ಪ್ರಯುಕ್ತ ದಿನಾಂಕ 20-10-93ರಲ್ಲಿ ತುಮಕೂರು ಜಿಲ್ಲಾ ಪಂಚಾಯತ್ ಹಕ್ಕುಪತ್ರಗಳ ನಡವಳಿಕೆಗಳನ್ನು ರದ್ದುಪಡಿಸಿದ್ದು ಅಲ್ಲದೇ ಅಂದಿನ ಆಶ್ರಯ ಯೋಜನೆ ನಿಯಮಾವಳಿಗಳ ಪ್ರಕಾರ ಹಂಚಲು ಸೂಚಿಸಿದ ಮೇರೆಗೆ ಈ 79 ಫಲಾನುಭವಿಗಳ ಪೈಕಿ 32 ಜನ ಮನೆಗಳನ್ನು ನಿರ್ಮಾಣ ಮಾಡಿದ್ದರಿಂದ ಇವರನ್ನು ಹೊರತುಪಡಿಸಿ ಉಳಿಕೆ ಎಲ್ಲಾ ಮಂಜೂರಾತಿಯನ್ನು ರದ್ದುಪಡಿಸಲಾಗಿತ್ತು.

1995-96ನೇ ಸಾಲಿನ ಇಂದಿರಾ ಆವಾಜ್ ಯೋಜನೆಯಡಿಯಲ್ಲಿ ಕೆಳಕಾಣಿಸಿದ 5 ಜನ ಫಲಾನುಭವಿಗಳ ಹೆಸರು ಸೇರ್ಪಡೆಯಾಗಿದ್ದರಿಂದ, ಅಲ್ಲದೆ ಈ ಐವರು ನಾಲ್ಕೈದು ವರ್ಷಗಳಿಂದ ಈಗ ಮಂಜೂರಾಗಿರುವ ನಿವೇಶನಗಳಲ್ಲಿ ಗುಡಿಸಲು ಕಟ್ಟಿಕೊಂಡು ವಾಸಿಸುತ್ತಿದ್ದರು ಎಂದು ದಿನಾಂಕ : 14-2-96ರಲ್ಲಿ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಹಕ್ಕುಪತ್ರ ನೀಡಿದ್ದಾರೆ.

1) ರಾಮಚಂದ್ರಯ ತಂದೆ ತಿಮ್ಮಯ್ಯ ಬೋವಿ ಎಸ್.ಸಿ
2) ರಂಗನಾಥ ತಂದೆ ಗೋವಿಂದಪ್ಪ, ಬೋವಿ ಎಸ್.ಸಿ
3) ರಾಜಪ್ಪ ತಂದೆ ರಂಗಯ್ಯ ಎಸ್.ಸಿ.
4) ಓಬಳಮ್ಮ ಗಂಡ ಓಬಳಯ್ಯ ಎಸ್.ಸಿ.
5) ಚಿತ್ತಯ್ಯ ವುರಫ್, ಹೊಂಬಳೀಗೌಡ ತಂದೆ ಚಿತ್ರಜ್ಜಗೋಲ್ಲರು (ಅಜೀನಹಳ್ಳಿ ಗೊಲ್ಲರಹಟ್ಟಿ ಗ್ರಾಮಟಾಣ)

ಈ ನಿವೇಶನ ಹಂಚಿಕೆ ಸಂಬಂಧಪಟ್ಟ ಗ್ರಾಮದಲ್ಲಿ ಮಹಾಜರು ನಡಿಸಿ ನಿವೇಶನ ಹಂಚಿಕೆ ಮಾಡಲಾಗಿದೆ. ಈ ಬಗ್ಗೆ ತಾಲ್ಲೂಕು ಪಂಚಾಯತಿ ಜಿಲ್ಲಾ ಪಂಚಾಯತಿ ಅನುಮೋದನೆ ನೀಡಿರುವುದಿಲ್ಲ, ಕೇವಲ ತಾಲ್ಲೂಕು ಪಂಚಾಯತಿ ಅಧ್ಯಕ್ಷರ ಆದೇಶಾನುಸಾರ ಕಾರ್ಯನಿರ್ವಾಹಕ ಅಧಿಕಾರಿಯವರು ದಿನಾಂಕ : 14-2-96ರಂದು ನಿವೇಶನ ಹಕ್ಕುಪತ್ರಗಳನ್ನು ನೀಡಿರುತ್ತಾರೆ. ಈ ಬಗ್ಗೆ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಕೂಡಲೇ ಖುದ್ದು ಸ್ಥಳ ತನಿಖೆ ನಡೆಸಿ ಹಂಚಿಕೆ ನಿಯಮಗಳು ಹಾಗೂ ಕರ್ನಾಟಕ ಪಂಚಾಯತ್‌ರಾಜ್ ಕಾಯ್ದೆ ಅನ್ವಯ ಸೂಕ್ತ ಕ್ರಮ ಕೈಗೊಂಡು ಸರ್ಕಾರಕ್ಕೆ ವರದಿ ಸಲ್ಲಿಸಲಿದ್ದಾರೆ.

(5) ಕುಂದಾಪುರ ಕ್ಷೇತ್ರದ ಹುಣ್ಸಮಕ್ಕಿ ಬೇಳೂರು ರಸ್ತೆಯ ಟೆಂಡರ್ ಕುರಿತು

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಕುಂದಾಪುರ ಕ್ಷೇತ್ರದ ಹುಣ್ಸಮಕ್ಕಿ ಬೇಳೂರು ರಸ್ತೆ ಕಳೆದ ವರ್ಷ ಟೆಂಡರಿನಲ್ಲಿ ಮಾಡಲಾದ ಟಾರು ರಸ್ತೆ, ಈ ವರ್ಷ ಹಾಳಾಗಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಗುರಿಯಾಗಿದೆ. ಈ ಬಗ್ಗೆ ತನಿಖೆ ನಡೆಸುವುದರೊಂದಿಗೆ ಸರಿಪಡಿಸುವ ವ್ಯವಸ್ಥೆ ಮಾಡಬೇಕಾಗಿ ಸದನದ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ಕುಂದಾಪುರ ತಾಲ್ಲೂಕಿನ ಹುಣ್ಸಮಕ್ಕಿ ಬೇಳೂರು ರಸ್ತೆಯನ್ನು 1992-93ನೇ ಸಾಲಿನಲ್ಲಿ ಜಿಲ್ಲಾಪರಿಷತ್ತಿನ ಮುಖ್ಯ ರಸ್ತೆಯನ್ನಾಗಿ ಮೈದರಗಿ ಲೋಕೋಪಯೋಗಿ ಇಲಾಖೆಗೆ ತೆಗೆದುಕೊಳ್ಳಲಾಗಿದೆ. ಈ ರಸ್ತೆಯು ಉದ್ದ 13 ಕಿ.ಮೀ. ಇದ್ದು 2.37